ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 18| UDP/1263/2021-23 || RNI.NO.50495/91 ॥ ತಾರೀಕು: 25–05–2021 ॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

# ಮತ್ತೆ ಲಾಕ್‌ಡೌನ್ : ಬೇಜವಾಬ್ದಾರಿತನಕ್ಕೆ ಸೀಲ್‌ಡೌನ್

ರಾಜ್ಯ ಸರಕಾರ ಲಾಕ್‌ಡೌನ್ ಜೂನ್ 7ರ ತನಕ ಮುಂದುವರೆಸಿದ್ದು ಯಥಾ ಸ್ಥಿತಿ ಮುಂದುವರಿಯಲಿದೆ . ಆದರೆ ಬೇಜವಾಬ್ದಾರಿತನ ತೋರಿದವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಉಡುಪಿ ಜಿಲ್ಲಾಧಿಕಾರಿ ಜಿ. ಜಗದೀಶ್ ಎಚ್ಚರಿಕೆ ನೀಡಿದ್ದಾರೆ.

ಕೊರೊನಾ ಸೋಂಕು ನಿಯಂತ್ರಿಸಲು ಜಿಲ್ಲಾಡಳಿತ ಎಲ್ಲ ರೀತಿಯ ಕ್ರಮಕೈಗೊಳ್ಳುತ್ತಿದ್ದರೂ ಕೆಲವರ ಬೇಜವಾಬ್ದಾರಿತನದಿಂದ ಸಮಸ್ಯೆ ಉಂಟಾಗುತ್ತಿದೆ. ಸೋಂಕಿತರು ಮನೆಯ ಹೊರಗೆ ಓಡಾಡುವುದು, ಸೋಂಕಿತರ ಮನೆಯವರು ಜಾಗೃತೆ ವಹಿಸದಿರುವುದು, ಜನರು ಅಗತ್ಯ ಸಾಮಗ್ರಿ ಹತ್ತಿರವೇ ಲಭ್ಯವಿದ್ದರೂ ಬೇರೆ ಕಡೆ ಹೋಗಿ ಖರೀದಿಸುವುದು. ಕೆಲವರು ಖರೀದಿ ನೆಪದಲ್ಲಿ ಅನಾವಶ್ಯಕ ಓಡಾಟ ನಡೆಸುವುದು, ಆಟೋಗಳ ಓಡಾಟಕ್ಕೆ ಅವಕಾಶವಿಲ್ಲದಿದ್ದರೂ ಆಟೋ ಚಾಲಕರು ಓಡಾಟ ನಡೆಸುವುದು ನಡೆಯುತ್ತಿದೆ. ಇಂತಹ ನಿಯಮ ಮೀರಿದವರ ಮೇಲೆ ಕಠಿಣಕ್ರಮ ಕೈಗೊಳ್ಳುತ್ತೇವೆ. ಅನಗತ್ಯವಾಗಿ ಓಡಾಡುವ ವಾಹನ ಸೀಜ್ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಮನೆಯಲ್ಲಿ ಅಗತ್ಯ ಸೌಲಭ್ಯಗಳನ್ನು ಹೊಂದಿರದ ರೋಗಿಗಳು ಕೋವಿಡ್ ಕೇರ್ ಸೆಂಟರ್‌ಗೆ ಕಡ್ಡಾಯವಾಗಿ ಸ್ಥಳಾಂತರ ಗೊಳ್ಳಬೇಕು. ಸ್ಥಳಾಂತರ ತಡೆಯುವ , ವಿರೋಧಿಸುವವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದ್ದಾರೆ. ಹೋಂ ಐಸೋಲೇಶನ್ ನಿಂದ ಮುಂಬೈಗೆ ತೆರಳಿದ ಕಾಪು ಲೈಟ್ ಹೌಸ್ ವಾರ್ಡ್‌ನ 4 ಮಂದಿ ಮೇಲೆ, ಎಫ್ ಐಆರ್ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಜಿಲ್ಲಾಧಿಕಾರಿ ಹಲವು ಗ್ರಾಮಗಳನ್ನು ಭೇಟಿ ಮಾಡುತ್ತಿದ್ದಾರೆ.

## ಕುಂದಾಪುರದಲ್ಲಿ ಬಂದೋಬಸ್ತು

ಕಳೆದ ಒಂದುವಾರದಿಂದ ಕುಂದಾಪುರದಲ್ಲಿ ಪೋಲೀಸ್ ಬಂದೋಬಸ್ತು ಜನರ ಮೇಲೆ ಪರಿಣಾಮ ಬೀರಿದೆ. ಅನಗತ್ಯವಾಗಿ ವಾಹನಗಳ ಓಡಾಟ ತಡೆಯಲು ಪೋಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕೇಂದ್ರ ಸ್ಥಳದಲ್ಲಿ ತಪಾಸಣೆ ನಡೆಸುತ್ತಿದ್ದು ಅದರೊಂದಿಗೆ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದಾರೆ. ಈ ಕಾರಣದಿಂದ ಬೆಳಗ್ಗಿನ ಜನರ ಓಡಾಟ ಬಹಳಷ್ಟು ಕಡಿಮೆಯಾಗಿದೆ. ಒಂದು ಊರಿನಿಂದ ಇನ್ನೊಂದು ಊರಿಗೆ ಅನಗತ್ಯವಾಗಿ ತಿರುಗಾಟ ಮಾಡುವ ಅಭ್ಯಾಸ ಕಡಿಮೆಯಾಗಿದೆ. ನಿಯಮ ಮೀರಿದವರ ವಾಹನ ವಶಪಡಿಸಿಕೊಳ್ಳಲಾಗುತ್ತಿದೆ

## ಹೋಂ ಐಸೋಲೇಶನ್ ಉಲ್ಲಂಘನೆಗೆ ಕ್ರಮ



ಕೊರೊನಾ ಪಾಸಿಟಿವ್ ಆಗಿ, ಹೋಂ ಐಸೋಲೇಶನ್‌ನಲ್ಲಿದ್ದ ಕಾವ್ರಾಡಿ ಗ್ರಾಮದ ವ್ಯಕ್ತಿಯೊಬ್ಬರು ಕ್ವಾರಂಟೈನ್ ನಿಯಮ ಉಲ್ಲಂಘಿಸಿ, ಹೊರಗೆ ತಿರುಗಾಟ ನಡೆಸಿರುವುದಕ್ಕೆ ಅವರ ವಿರುದ್ಧ ಕುಂದಾಪುರ ಗ್ರಾಮಾಂತರ ಠಾಣೆಯಲ್ಲಿ ಕೇಸು ದಾಖಲಿಸಲಾಗಿದೆ ಎಂದು ಉಡುಪಿ ಜಿಲ್ಲಾಧಿಕಾರಿ ಜಿ. ಜಗದೀಶ್ ತಿಳಿಸಿದ್ದಾರೆ.

ಕಾವ್ರಾಡಿ ಗ್ರಾಪಂ. ಪಿಡಿಒ ಅವರು ನೀಡಿದ ದೂರಿನಂತೆ ಕಾವ್ರಾಡಿಯ ನಿವಾಸಿ ಮಹಮ್ಮದ್ ಜಾಫರ್ ವಿರುದ್ಧ ಕೇಸು ದಾಖಲಿಸಲಾಗಿದೆ. ಕುಂದಾಪುರದ ಸಹಾಯಕ ಆಯುಕ್ತ ಕೆ. ರಾಜು ಅವರು ಭೇಟಿ ನೀಡಿ, ಪರಿಶೀಲಿಸಿದಾಗ ಈ ವಿಚಾರ ಬೆಳಕಿಗೆ ಬಂದಿದೆ. ಕುಂದಾಪುರ ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗಭೂಷಣ ಉಡುಪ, ಕಂಡ್ಲೂರು, ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಲತಾ ನಾಯಕ್, ಆಶಾ ಕಾರ್ಯಕರ್ತರು, ಪೋಲೀಸ್ ಸಿಬ್ಬಂದಿ, ಮತ್ತಿತರು ಉಪಸ್ಥಿತರಿದ್ದರು.

### ಜೂನ್ 7ರ ತನಕ ಗೃಹ ಬಂಧನ : ತಜ್ಞರು ಸಲಹೆ ನೀಡಿಯಾರೆ?

# ಮನೆಯಲ್ಲಿ ಕುಳಿತು ಮಾಡುವುದೇನು?

ಸರಕಾರ ಕೋವಿಡ್ ನಿಯಮ ಪಾಲಿಸಲು ಹಲವು ಮಾರ್ಗಸೂಚಿಗಳನ್ನು ತಿಳಿಸಿದೆ. ಮನೆಯಲ್ಲೇ ಇರಿ ಎನ್ನುವುದು ಇದರಲ್ಲಿ ಪ್ರಮುಖವಾದುದು. ತಿಂಗಳಿಡೀ ಮನೆಯಲ್ಲಿ ಕುಳಿತು ಮಾಡುವುದೇನು ಎಂಬ ಚಿಂತೆ ಎಲ್ಲರಲ್ಲೂ ಕಾಡಿದೆ. ಬರೀ ಊಟ, ಉಪಹಾರ ಮಾತ್ರ ಜನರಿಗೆ ಬೇಕಾಗಿದೆಯೇ . ಉದ್ಯೋಗಕ್ಕೆ ತೆರಳುವ ಯುವಕ – ಯುವತಿಯರು ವ್ಯವಹಾರಸ್ಥ ಪುರುಷರು ಮಾನಸಿಕವಾಗಿ ಬಹಳ ಸಂಕಟ ಅನುಭವಿಸುತ್ತಿದ್ದಾರೆ. ಆರ್ಥಿಕ ಸಂಕಷ್ಟದೊಂದಿಗೆ ಸಮಯ ಕಳೆಯುವುದು ಹೇಗೆ ಎಂಬ ಕಳವಳ. ಸರಕಾರಕ್ಕೆ ಸಲಹೆ ನೀಡುವ ತಜ್ಞರು ಜನರ ಮನೆಯಲ್ಲಿ ಉಲ್ಲಸಿತರಾಗಿರಲು ಏನಾದರೂ ಸಲಹೆ ನೀಡಲಾರರೆ? ಎನ್ನುವ ಪ್ರಶ್ನೆ ನಾಗರಿಕರದ್ದು.

ಕಳೆದ ವರ್ಷ ದಿನವಿಡೀ ಲಾಕ್‌ಡೌನ್ ಆದಾಗ ಜನರು ಮನೆಯಲ್ಲೇ ಕುಳಿತು ಬೇಸರಗೊಳ್ಳದಂತೆ ಕೇಂದ್ರ ಸರಕಾರ ವಾರ್ತಾ ಇಲಾಖೆ ಮೂಲಕ ರಾಮಾಯಣ ಮಹಾಭಾರತ ಸಹಿತ ಹಲವು ಜನರ ಹೃದಯಗೆದ್ದ ಧಾರಾವಾಹಿಗಳನ್ನು ಪ್ರಸಾರ ಮಾಡುವ ಮೂಲಕ ಜನ ಭಾವನಾತ್ಮಕವಾಗಿ ಪ್ರಫುಲ್ಲರಾಗಿರುವಂತೆ ಮಾಡಿತ್ತು. ಇದು ಫಲಪ್ರದವಾಯಿತು ಸಹ . ಪ್ರಧಾನಿ ನರೇಂದ್ರ ಮೋದಿವರು ಶಂಖ, ಜಾಗಟೆ ಬಾರಿಸುವ ಮೂಲಕ, ದೀಪ ಹಚ್ಚುವ ಮೂಲಕ ಕೊರೊನಾ ವಾರಿಯರ್‌ಗೆ ಕೃತಜ್ಞತೆ ಅರ್ಪಿಸಿ, ದೇಶದ ಒಗ್ಗಟ್ಟು ಪ್ರದರ್ಶಿಸಿ ಎಂದು ಕರೆ ನೀಡಿ ಸ್ಫೂರ್ತಿ ತುಂಬಿದರು.

ಆದರೆ ಈ ವರ್ಷ ಆಯಾ ರಾಜ್ಯಗಳ ಪರಿಸ್ಥಿತಿ ಗಮನಿಸಿ ಲಾಕ್‌ಡೌನ್ ನಿರ್ಧಾರ ಮಾಡಲು ಪ್ರಧಾನಿ ತಿಳಿಸಿದುದರಿಂದ



ಒಂದೊಂದು ರಾಜ್ಯಗಳು ತಮಗಿಷ್ಟ ಬಂದಂತೆ ಲಾಕ್‌ಡೌನ್ ಮಾಡಿವೆ. ಈ ಕಾರಣದಿಂದ ದೂರದರ್ಶನದ ಮೂಲಕವಾಗಲಿ , ಬೇರೆ ಮಾಧ್ಯಮದ ಮೂಲಕವಾಗಲಿ ಜನರನ್ನು ಮನೆಯಲ್ಲೇ ಸಂತಸದಲ್ಲಿರಲು ಯಾವ ಕಾರ್ಯಕ್ರಮಗಳೂ ಇಲ್ಲದಂತಾಗಿದೆ. ಸುದ್ದಿ ಚಾನಲ್‌ಗಳು ದಿನವಿಡೀ ತಲೆ ಚಿಟ್ಟು ಹಿಡಿಸುವಂತೆ ಸುದ್ದಿ ಬಿತ್ತರಿಸುತ್ತವೆ. ಕೋವಿಡ್ ಕಾರಣದಿಂದ ಮನರಂಜನಾ ಚಾನಲ್‌ಗಳಲ್ಲೂ ಧಾರಾವಾಹಿ ಮುಂದುವರಿಯುತ್ತಿಲ್ಲ. ಉತ್ತಮ ಚಿತ್ರಗಳು, ಕಾರ್ಯಕ್ರಮಗಳು ಪ್ರಸಾರಗೊಳ್ಳುತ್ತಿಲ್ಲ. ಮೊಬೈಲ್ ಹಿಡಿದುಕೊಂಡು ಇಡೀದಿನ ವಾಟ್ಸಪ್, ಯೂಟ್ಯೂಬ್ , ಫೇಸ್‌ಬುಕ್ ನೋಡುತ್ತಾ ಕುಳಿತುಕೊಳ್ಳುವುದೂ ಸಾಧ್ಯವಾಗದ ಮಾತು. ಪುಸ್ತಕ ಪ್ರಿಯರು ಮನೆಯಲ್ಲಿ ತಂದಿಟ್ಟ ಪುಸ್ತಕಗಳನ್ನು ಓದಬಹುದು. ಆದರೆ ಒಂದು ತಿಂಗಳು ಓದುವಷ್ಟು ಪುಸ್ತಕಗಳು ಯಾರೂ ಇಟ್ಟುಕೊಳ್ಳುವುದಿಲ್ಲ.

ಮನೆಯಲ್ಲಿ ಕುಳಿತುಕೊಂಡೇ ಗೊತ್ತಿಲ್ಲದ ವಾಹನ ಚಾಲಕರು, ವಿವಿಧ ವ್ಯವಹಾರಸ್ಥರು, ಕಾರ್ಮಿಕರು ಏನು ಮಾಡುವುದೆಂದು ಅರಿವಾಗದೇ ಕಂಗಾಲಾಗಿದ್ದಾರೆ. ಕೃಷಿ, ಕೆಲವು ಕಾಮಗಾರಿಗಳಿಗೆ ಅವಕಾಶ ನೀಡಿದ್ದರೂ ಪ್ರಯಾಣಕ್ಕೆ ಅನುಕೂಲವಿಲ್ಲದಿರುವುದರಿಂದ ಕೃಷಿ ಕಾರ್ಯಗಳಲ್ಲೂ ಜನ ತೊಡಗಿಸಿಕೊಳ್ಳುತ್ತಿಲ್ಲ. ನಿತ್ಯ ಕೆಲಸಕ್ಕೆ ಹೋಗುತ್ತಿದ್ದ ಮಹಿಳೆಯರಿಗೆ ಹಣವೂ ಇಲ್ಲ, ಸಮಯವೂ ಸಾಗುವುದಿಲ್ಲ ಎಂಬಂತಾಗಿದೆ. ಮನೆಯ ಮಕ್ಕಳಿಗೂ ಶಾಲೆಯಿಲ್ಲ. ಮನೆಯವರಿಗೂ ಕೆಲಸವಿಲ್ಲ. ಒಂದೇ ಮನೆಯಲ್ಲಿ ಹಲವರಿದ್ದರಂತೂ ಏನು ಮಾಡುವುದೆಂದು ತಿಳಿಯದ ಪರಿಸ್ಥಿತಿ.

ನೂರಾರು ಬಸ್ಸುಗಳು ತಿಂಗಳಿಂದ ಓಡಾಟವಿಲ್ಲದೇ ನಿಂತ ಚಿತ್ರ ವಾಹನ ಮಾಲಕರ ಚಾಲಕರ ಸ್ಥಿತಿಗತಿ ವಿವರಿಸುತ್ತದೆ. ಸರಕಾರ ನೀಡುವ ಘೋಷಿಸಿರುವ ಸವಲತ್ತುಗಳು ಮಧ್ಯಮ ವರ್ಗದವರಿಗೆ ಏನೂ ಪ್ರಯೋಜನವಾಗದು. ಮಧ್ಯಮ ವರ್ಗದ ಜನರಸ್ಥಿತಿ ಅತ್ತ ಕೇಳುವಂತೆಯೂ ಇಲ್ಲ ಕೇಳದಿರುವಂತೆಯೂ ಇಲ್ಲ ಎನ್ನುತ್ತಾರೆ. ಸಣ್ಣಪುಟ್ಟ ಅಂಗಡಿ, ಹೋಟೇಲ್ ಕ್ಯಾಂಟೀನ್, ಕ್ಯಾಟರಿಂಗ್, ಜಾತ್ರೆ ವ್ಯವಹಾರ, ಸಂತೆ ವ್ಯವಹಾರ ಮಾಡಿಕೊಂಡವರು ಯಾವ ಪಟ್ಟಿಗೂ ಬರುವುದಿಲ್ಲ. ಎಂಬಂತಾಗಿದೆ. ಇವರಿಗೆಲ್ಲಿ ದಿನ ಕಳೆಯುವುದೇ ಸಮಸ್ಯೆ. ಆರೋಗ್ಯ ಮುಖ್ಯ ಬದುಕು ಮುನ್ನಡೆಸುವುದೂ ಅಗತ್ಯ ಎನ್ನುತ್ತಾರೆ. ತಜ್ಞರು ಜನ ಉಲ್ಲಸಿತರಾಗಲು ಅಗತ್ಯ ಯೋಜನೆ ರೂಪಿಸಲಿ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಹರ್ಷ ರಿಫ್ರೆಶ್‌ಮೆಂಟ್
ಹೋಟೇಲ್ ಶರೋನ್– ಕುಂದಾಪುರ
ಪಾರ್ಸೆಲ್ ಸೇವೆ ಲಭ್ಯವಿದೆ
ನಮ್ಮ ಹೋಟೇಲ್‌ನಲ್ಲಿ ಎಂದಿನಂತೆ ಊಟ, ಉಪಹಾರ ಲಭ್ಯವಿದ್ದು, ಜಿಲ್ಲಾಡಳಿತದ ಸೂಚನೆಯಂತೆ ಪಾರ್ಸೆಲ್ ಸೇವೆ ನೀಡಲಾಗುತ್ತದೆ. ಮನೆಗೆ ತರಿಸಿಕೊಳ್ಳ ಬಯಸುವವರು ಸಾಗಾಟದ ಪ್ರತ್ಯೇಕ ವೆಚ್ಚ ನೀಡಿ ಅಗತ್ಯ "ಪಾರ್ಸೆಲ್" ಪಡೆಯುವ ಅವಕಾಶವಿದೆ.
ತಮ್ಮ ಅಗತ್ಯತೆಗಳಿಗೆ ವಿಚಾರಿಸಿರಿ :
9342440176 , 08254–230673